ತಿಳಿದಿಟ್ಟುಕೋ, ಯಾರು ಕತ್ತಲನ್ನು ಸೃಷ್ಟಿಸಬಲ್ಲನೋ ಆತ ನಾಳೆ ಜಗತ್ತನ್ನೇ ಆಳುತ್ತಾನೆ...' ಎಂದೆನ್ನುತ್ತಿರುವಾಗ ಅವನ ಕಣ್ಣಲ್ಲಿ ಬೆಳಕಿತ್ತು. ಮೋ ಆ ದಿನ ವಿಚಿತ್ರ ಮೂಡಿನಲ್ಲಿದ್ದಂತೆ ಕಂಡ. ಇಂತಹುದೇ ಏನೇನೋ ಅಸಂಬದ್ಧ ಮಾತುಗಳು, ಫಿಲಾಸಫಿಯ ಡೈಲಾಗುಗಳಲ್ಲೇ ಮುಳುಗಿದ್ದ.

ಹೀಗೆಲ್ಲಾ ಇದೆ ಎಂದ ಮಾತ್ರಕ್ಕೆ ಮೋ–ನ ಬಗ್ಗೆ ನನಗೆ ತಕರಾರುಗಳೇ ಇಲ್ಲವೆಂದೇನಲ್ಲ. ಅವನು ಹೊರಗಿನಿಂದ ಅತೀ ಆತ್ಮೀಯವಾಗಿ ಮಾತನಾಡಿಸುತ್ತಿದ್ದರೂ ಅವುಗಳಲ್ಲಿ ಅಂತರಂಗದಿಂದ ಬಂದವುಗಳೆಷ್ಟು ಬರೀ ತೋರಿಕೆಯದೆಷ್ಟು ಎಂದು ಕಂಡುಹಿಡಿಯಲು ನನ್ನಿಂದ ಸಾಧ್ಯವಾಗಿಲ್ಲ. ಅವು ತೋರಿಕೆಯದೂ ಇರಬಹುದೆನ್ನುವುದಕ್ಕೆ ಕಾರಣಗಳಿಲ್ಲದಿಲ್ಲ. ಅನೇಕ ಬಾರಿ ಮಾತನಾಡುವಾಗ ಆತ ನನಗೆ 'ಸರ್' ಎಂದು ಕರೆಯುತ್ತಾನೆ. ಈ 'ಸರ್' ಎನ್ನುವ ಪದ ಭಾರತದಲ್ಲಿ ಬಳಸಲ್ಪಡುತ್ತಿರುವ ರೀತಿಯ ಬಗ್ಗೆಯೇ ನನಗೆ ಅಸಮಾಧಾನವಿದೆ. ಬಾಲ್ಯ ಸ್ನೇಹಿತ ಎಂದಾದ ಮೇಲೆ ಅಪರೂಪಕ್ಕಾದರೂ ಸರ್ ಎಂದು ಕರೆಯುವ ಅಗತ್ಯವಾದರೂ ಏನಿದೆ?

ನನಗೆ ಗೊತ್ತಿರುವ ಅವನ ವಿಚಿತ್ರ ಸ್ವಭಾವಗಳಲ್ಲಿ ಆತನಿಗೆ ಪೆಟ್ರೋಲ್ ವಾಸನೆ ಇಷ್ಟವಾಗುವುದೂ ಒಂದು. ಪೆಟ್ರೋಲ್ ಬಂಕಿನಲ್ಲಿ ಗಾಡಿಗೆ ಪೆಟ್ರೋಲ್ ಹಾಕಿ ಹೊರ ತೆಗೆದ ನೋಝಲ್ಲಿನ ತುದಿಗೆ ಕೈ ಬೆರಳು ಹಿಡಿದು ಪೆಟ್ರೋಲಿನ ಹನಿಯನ್ನು ತನ್ನ ತೋರು ಹಾಗೂ ಹೆಬ್ಬೆರಳುಗಳ ನಡುವೆ ಉಜ್ಜಿ ಮೂಗಿಗೆ ಹಿಡಿದುಕೊಂಡು ಸಂಪಿಗೆ ಹೂವಿನ ಪರಿಮಳ ಆಸ್ವಾದಿಸಿದಂತೆ ಉಸಿರೆಳೆದು ಉಬ್ಬುತ್ತಾನೆ ಆತ! ಎಲ್ಲಾದರೂ ಉಂಟೆ? ನಾನೊಮ್ಮೆ ಆತ ಹಾಗೆ ಮಾಡುತ್ತಿರುವಾಗ, 'ನನಗೆ ಸಾರಿನ ವಾಸನೆ ತುಂಬಾ ಇಷ್ಟ, ಅದಕ್ಕೇ ನಾನು ಊಟವಾದ ಮೇಲೆ ಕೈಗಳನ್ನು ಸರಿಯಾಗಿ ತೊಳೆದು ಕೊಳ್ಳುವುದೇ ಇಲ್ಲ' ಎಂದಿದ್ದೆ. 'ನಾಟ್ ಬ್ಯಾಡ್... ನಾಟ್ ಬ್ಯಾಡ್...' ಅನ್ನುತ್ತಾ ಆತ ಗಹಗಹಿಸಿ ನಕ್ಕಿದ್ದ, ಜೊತೆಗೆ ಅದೇ ವದ್ದಾ... ವದ್ದಾss. ನನಗೆ ಆತನ ಉಕ್ಕಿ ಹರಿಯುವ ನಗುವಿನ ಬಗ್ಗೆ ಗುಮಾನಿಯಿದೆ; ಅದು ಎದೆಯಾಳದಿಂದ ಹೊಮ್ಮಿದ್ದೋ ಅಥವಾ ಬರೀ ಗಂಟಲ ಮೇಲಿನದೋ ಎಂದು.

ಈತ ಏರ್‌ಪೋರ್ಟಿನಲ್ಲಿ ಹೆರಾಯಿನ್ ಜೊತೆಗೆ ಒಮ್ಮೆ ಸಿಕ್ಕುಬಿದ್ದಿದ್ದ. ನಂತರ ಏನೇನೋ ಸಾಹಸಮಾಡಿ 'ನನ್ನ ಸ್ವಂತ ಬಳಕೆಗೆ ಇಟ್ಟುಕೊಂಡದ್ದು ಅದು, ಅದೇನೂ ಅಪರಾಧವಲ್ಲ' ಎಂದೆಲ್ಲಾ ವಾದಿಸಿ ಗೆದ್ದು ಜೈಲಿನಿಂದ ಹೊರಬಂದಿದ್ದ. ಆಗಲೇ ನನಗೆ ಹಿಂದೊಮ್ಮೆ ಆತನ ಮೇಲೆ ಲೈಸೆನ್ಸ್ ಇಲ್ಲದ ಪಿಸ್ತೂಲು ಇಟ್ಟುಕೊಂಡುದದಕ್ಕಾಗಿ ಪೊಲೀಸ್ ಕೇಸೂ ಆಗಿತ್ತು ಎಂಬ ವಿಷಯ ಗೊತ್ತಾದದ್ದು. 'ಆತ್ಮರಕ್ಷಣೆಗಾಗಿ ಇಟ್ಟುಕೊಂಡದ್ದು ಅನಧಿಕೃತವೇನಲ್ಲ, ಲೈಸನ್ಸ್ ಅವಧಿ ಮುಗಿದು ಹೋಗಿತ್ತಷ್ಟೇ' ಎಂಬುದು ಆತನ ಸಮಜಾಯಿಷಿಯಾಗಿತ್ತು. ಯಾವುದೇ ಮಲ್ಟಿನ್ಯಾಷನಲ್ ಕಂಪೆನಿಯಾಗಿರಲಿ, ಎಷ್ಟೇ ದೊಡ್ಡ ಹುದ್ದೆಯಲ್ಲಿರಲಿ, ಅವೆಲ್ಲವುಗಳನ್ನೂ ಮೀರಿದ ಶ್ರೀಮಂತ ಜೀವನ ಆತ ನಡೆಸುತ್ತಿರುವುದು ನನಗೆ ಯಾವತ್ತಿಗೂ ಸೋಜಿಗದ ವಿಷಯವೇ. ಏರ್‌ಪೋರ್ಟಿನಲ್ಲಿ ಹೆರಾಯಿನ್ನೊಡನೆ ಸಿಕ್ಕಿಬಿದ್ದುದು ಗೊತ್ತಾದ ಮೇಲೆ ಈತ ಡ್ರಗ್ಸ್ ಸ್ಮಗ್ಲಿಂಗ್ ಮಾಡುತ್ತಿರಬಹುದೇ ಎಂಬ ಸಂಶಯ ನನ್ನನ್ನು ಕಾಡಿದ್ದು ಸುಳ್ಳಲ್ಲ.

ಏನೇ ಆದರೂ ಈತನ ಆದಾಯ ಕೇವಲ ನೌಕರಿಗೆ ಸೀಮಿತವಾಗಿಲ್ಲ ಎಂಬುದು ನನಗೆ ಖಾತ್ರಿಯಿತ್ತು. ಇದಕ್ಕೆ ಪೂರಕವೆನ್ನುವಂತೆ ಅವನ ವ್ಯವಹಾರದ ಒಂದು ಬಲು ಕುತೂಹಲಕಾರಿ ವಿಷಯವೊಂದನ್ನು ವಿಸ್ಕಿಯ ಅಮಲಿನಲ್ಲೊಮ್ಮೆ ಆತನೇ ನನಗೆ ಹೇಳಿದ. ಸ್ಪೇನ್ ದೇಶದ ಸರಕಾರ ತನ್ನೊಡಲ ಪರಿಸರ ರಕ್ಷಣೆಗಾಗಿ ಹೊಸ ಯೋಜನೆಯೊಂದನ್ನು ಕಾರ್ಯರೂಪಕ್ಕೆ ತರಲು ಹೊರಟಿದೆ. **SMP(Standard Manufacturing Practices)** ಎಂಬ